ಆರ್.ಟಿ.ಸಿ. ತಿದ್ದುಪಡಿ

11 (97) ಡಾ ಸುಧಾಕರ್ ಕೆ. (ಚಿಕ್ಕಬಳ್ಳಾಪುರ) :– ಮಾನ್ಯ ಕಂದಾಯ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಆರ್.ಟಿ.ಸಿ. ತಿದ್ದುಪಡಿ ಅಧಿಕಾರವನ್ನು ಕಲಂ 3 ರಿಂದ 9ರ ವರೆಗೆ ಯಾವ ಅಧಿಕಾರಿಯು ವ್ಯಾಪ್ತಿಯಲ್ಲಿ ಬರುತ್ತದೆ ; (ವಿವರ ನೀಡುವುದು)

(ಆ) ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಎಷ್ಟು ಒತ್ತುವರಿ ಜಾಗಗಳನ್ನು ತೆರವು ಮಾಡಲಾಗಿದೆ; ತೆರವು ಮಾಡಲು ಜಿಲ್ಲಾಧಿಕಾರಿಯವರಿಗೆ ಎಷ್ಟು ಅನುದಾನ ನೀಡಲಾಗಿರುತ್ತದೆ ;

(ಇ) ಇನಾಮು ಗ್ರಾಮ, ಸಾರ್ವಜನಿಕ ಸರ್ಕಾರಿ ಸ್ವತ್ತುಗಳನ್ನು ಒಳಪಡಿಸಿಕೊಂಡು ಆದ್ಯತೆ ಮೇರೆಗೆ ಸರ್ವೆ ಮಾಡಲು ಸರ್ವೆಯರ್ ಹುದ್ದೆಯ ಸಂಖ್ಯೆಯನ್ನು ಏರಿಸುವ ಬಗ್ಗೆ ವಿವರ ನೀಡುವುದು ;

(ಈ) ಸರ್ಕಾರಿ ಜಮೀನು ಮಂಜೂರಾತಿಯ ನಂತರ ದುರಸ್ಥಿಗೊಳಿಸಲು ಏನು ಕ್ರಮ ಕೈಗೊಳ್ಳಲಾಗಿದೆ ;

(ಉ) ಹೆಗ್ಗೇನಹಳ್ಳಿ ಮತ್ತು ಜರಬಂಡಹಳ್ಳಿ ಗ್ರಾಮ ಪಂಚಾಯಿತಿ ಜಮೀನುಗಳ ನಕ್ಷೆ ಕಳೆದು ಹೋಗಿರುತ್ತದೆಯೇ ; ಆ ಗ್ರಾಮಗಳ ಜಮೀನನ್ನು ಭೂಮಾಪನ ಮಾಡಿಸಿ ಹೊಸ ನಕ್ಷೆ ತಯಾರು ಮಾಡಿಸುವ ಬಗ್ಗೆ ವಿವರ ನೀಡುವುದು ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು) :–

(ಅ) ಕರ್ನಾಟಕ ಭೂಕಂದಾಯ ನಿಯಮ 1964 ರ ಕಲಂ 25 ರಂತೆ ಕಂದಾಯ ನ್ಯಾಯಾಲಯ ಮತ್ತು ಕಲಂ 136(2) ರಡಿ ಪಹಣಿಗಳಲ್ಲಿರುವ ತಪ್ಪುಗಳನ್ನು ಸರಿಪಡಿಸುವ ಅಧಿಕಾರವನ್ನು ಸಹಾಯಕ ಆಯುಕ್ತರು ಹೊಂದಿರುತ್ತಾರೆ.

(ಆ) ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಒಟ್ಟು 19.18 ಎಕರೆ ಒತ್ತುವರಿ ಜಾಗಗಳನ್ನು ತೆರವುಗೊಳಿಸಲಾಗಿದೆ ಹಾಗೂ ಒತ್ತುವರಿ ತೆರವಿಗಾಗಿ ರೂ. 10.00 ಲಕ್ಷಗಳನ್ನು ಅನುದಾನ ಬಿಡುಗಡೆ ಮಾಡಲಾಗಿದೆ.

(ಇ) ಹೊಸದಾಗಿ ನೇಮಕಗೊಂಡು ವೃತ್ತಿ ಬುನಾದಿ ತರಬೇತಿ ಪೂರ್ಣಗೊಳಿಸಿರುವ 1613 ಭೂಮಾಪಕ ಶಿಕ್ಷಣಾರ್ಥಿಗಳನ್ನು ಸೇವಾ ನಿರತ ತರಬೇತಿಗಾಗಿ ವಿವಿಧ ತಾಲ್ಲೂಕು ಕಛೇರಿಗಳಿಗೆ ನಿಯೋಜಿಸಲಾಗಿದೆ. ಸದರಿ ತರಬೇತಿಯು ಜುಲೈ 14ರ ಅಂತ್ಯಕ್ಕೆ ಪೂರ್ಣಗೊಳ್ಳಲಿದ್ದು. ತರಬೇತಿ ಪೂರ್ಣಗೊಂಡನಂತರ ಹುದ್ದೆಗಳನ್ನು ಹಂಚಿಕೆ ಮಾಡಿ ಭೂಮಾಪಕರುಗಳನ್ನು ನೇಮಿಸಲಾಗುವುದು.

(ಈ) ಸರ್ಕಾರಿ ಜಮೀನು ಮಂಜೂರಾತಿಯು ನಂತರ ಅಳತೆ ಮತ್ತು ದುರಸ್ತಿಕ್ರಮ ಕೈಗೊಳ್ಳುವುದು ಸರ್ಕಾರದ ಸುತ್ತೋಲೆ ಸಂಖ್ಯೆ ; ಕಂಇ 197 ಭೂದಾಸ 2008, ದಿನಾಂಕ:18/08/2008 ರಂತೆ

ಕಡ್ಡಾಯವಾಗಿದ್ದು, ನಮೂನೆ–1 ರಿಂದ 5 ನ್ನು ಭರ್ತಿ ಮಾಡಿ ಮಂಜೂರಯಾದ ಸರ್ವೆ ನಂಬರ್ನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಅಳತೆ ಕಾರ್ಯ ನಂತರ ದುರಸ್ತಿ ಕೆಲಸ ಪೂರೈಸಲಾಗುವುದು. ಇದಕ್ಕೆ ಪೂರ್ವಸಿದ್ಧತೆಯಾದ 1 ರಿಂದ 5 ರ ನಮೂನೆಗಳನ್ನು ಭರ್ತಿಮಾಡುವ ಕಾರ್ಯ ಮುಗಿದಿದ್ದು, ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ಸದ್ಯದಲ್ಲೇ ಅಳತೆ ಕೆಲಸ ಪ್ರಾರಂಭಿಸಲಾಗುತ್ತದೆ.

(ಊ) ಹೆಗ್ಗೇನಹಳ್ಳಿ ಗ್ರಾಮ ಜೋಡಿ ಗ್ರಾಮವಾಗಿದ್ದು, ಡಿಟೇಲ್ ಸರ್ವೆಯಾಗಿ ಸರ್ವೆ ದಾಖಲೆಗಳು ಮತ್ತು ಗ್ರಾಮ ನಕಾಶೆ ಅಸ್ತಿತ್ವದಲ್ಲಿರುತ್ತದೆ. ಜರಬಂಡಹಳ್ಳಿ ಗ್ರಾಮದ ಮೂಲ ದಾಖಲೆಗಳ ಪೈಕಿ ಮೂಲ ಟಿಪ್ಪಣಿ ಮತ್ತು ಮೂಲ ಪಕ್ಕಾ ದಾಖಲೆಗಳು ಲಭ್ಯವಿಲ್ಲದೆ ಇದ್ದು, ಸದರಿ ದಾಖಲೆಗಳ ಪುನರ್ ನಿರ್ಮಾಣಕ್ಕಾಗಿ ಈಗಾಗಲೇ ಭೂಮಾಪಕರನ್ನು ಅಳತೆ ಕಾರ್ಯಕ್ಕಾಗಿ ನಿಯೋಜಿಸಲಾಗಿದ್ದು, ಅಳತೆ ಕಾರ್ಯ ಪ್ರಗತಿಯಲ್ಲಿರುತ್ತದೆ.

ಶ್ರೀ ಡಾ.ಕೆ.ಸುಧಾಕರ್ : ಮಾನ್ಯ ಅಧ್ಯಕ್ಷರೆ, ಕೈ ಬರಹದ ಆರ್.ಟಿ.ಸಿ ಯನ್ನು ಗಣಕೀಕೃತಗೊಳಿಸುವ ಸಂದರ್ಭದಲ್ಲಿ ಉಂಟಾಗಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸುವುದಕೋಸ್ಕರ...

ಅಧ್ಯಕ್ಷರು : ಮಾನ್ಯ ಸುಧಾಕರ್‌ರವರೆ ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರೆ, ಪಹಣಿ ವಿಚಾರದಲ್ಲಿ ಕೆಲವು ಹೊಸ ಸೂತ್ರಗಳು ಬಂದಿದ್ದು, ಇದರಲ್ಲಿ ಸ್ವಲ್ಪ ಗೊಂದಲವಿದೆ ಎಂದು ಕೆಲವರು ನನ್ನ ಹತ್ತಿರ ಬಂದು ಬೆಳಿಗ್ಗೆ ಹೇಳಿದ್ದಾರೆ. ದಯವಿಟ್ಟು ಕಂದಾಯ ಇಲಾಖೆಯ demand ಮುಂದೆ ಬರುತ್ತದೆ. ಆಗ ಇದನ್ನು ಚರ್ಚೆಗೆ ಇಟ್ಟುಕೊಳ್ಳೋಣ.

ಶ್ರೀ ಡಾ.ಕೆ.ಸುಧಾಕರ್ : ಇದು ಬಹಳ ದೊಡ್ಡ ಸಮಸ್ಯೆಯಾಗಿದೆ.

ಅಧ್ಯಕ್ಷರು : ಈ ಪ್ರಶ್ನೆಗೆ ಅವರು ತಕ್ಷಣ ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆಂದು ನನಗೂ ಗೊತ್ತಿದೆ. ಕಂದಾಯ ಇಲಾಖೆಯ ಬೇಡಿಕೆ ಬಂದಮೇಲೆ ಈ ವಿಷಯವನ್ನು 2 ದಿವಸ ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಿದ್ದುಪಡಿ ಮಾಡುವುದಕ್ಕೆ ಅವರು Assistant Commissioner ರವರ ಬಳಿ ಅಥವಾ ಬೇರೆ ಅಧಿಕಾರಿಗಳ ಬಳಿ ಓಡಾಡಬೇಕಾಗಿದೆ.

ಶ್ರೀ ಡಾ.ಕೆ.ಸುಧಾಕರ್ : ಮಾನ್ಯ ಅಧ್ಯಕ್ಷರೆ, ಇದರ ಕಾರ್ಯವ್ಯಾಪ್ತಿಯನ್ನು Assistant Commissioner ಗೆ ಕೊಟ್ಟಿದ್ದಾರೆ. ಅದನ್ನು ತಕ್ಷಣ ತಹಶೀಲ್ದಾರರವರಿಗೆ ಕೊಟ್ಟರೆ ಸ್ವಲ್ಪಮಟ್ಟಿಗೆ ರೈತರಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಈಗ ಸದನವನ್ನು ಸೇರಿದ್ದೇವೆ. ಬೇಕಾದರೆ ಕಂದಾಯ ಇಲಾಖೆಯ ಬೇಡಿಕೆಯನ್ನು 2–3 ದಿವಸಗಳ ಮುಂಚೆಯೇ ಹಾಕಿಕೊಳ್ಳೋಣ. ಪೋಡಿ ವಿಚಾರ, ಪಹಣಿ ವಿಚಾರ ಇದೆ. ಇವುಗಳನ್ನು ವಿಸ್ತತವಾಗಿ ಚರ್ಚೆ ಮಾಡಿದರೆ ಖಂಡಿತವಾಗಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆ. ಇದರ ಬಗ್ಗೆ ಬೆಳಕು ಚೆಲ್ಲಿದಂತೆ ಆಗುತ್ತದೆ. ವಿಚಾರವಾಗಿ ಬೆಳಿಗ್ಗೆ ಮಾತನಾಡಿದ್ದಾರೆ. ಈ ಪ್ರಶ್ನೆಯಿಂದ ನಿಮ್ಮ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಚರ್ಚೆ ಮಾಡಿ ಕೊಡಿಸೋಣ ವಿಸ್ತೃತವಾದ ಉತ್ತರ ಕೊಡಿಸೋಣ.

ಶ್ರೀ ವಿ. ಶ್ರೀನಿವಸ ಪ್ರಸಾದ್ : ನಾವು ಪ್ರಯತ್ನವನ್ನು ಮಾಡಿದ್ದೇವೆ. ಆರ್.ಟಿ.ಸಿ correction ಅನ್ನು ಸರಿಪಡಿಸುವುದು ಹೇಗೆ ಎನ್ನುವುದಕ್ಕೆ ನಾವು pilot projects ನ್ನು ತುಮಕೂರು, ಕೋಲಾರದಲ್ಲಿ ತೆಗೆದುಕೊಂಡಿದ್ದೇವೆ. ಅದು ಕೋಲಾರದಲ್ಲಿ ಚೆನ್ನಾಗಿ ಆಗಿದೆ. ಈ ಗ್ರಾಮ ಮಟ್ಟದಲ್ಲಿ ಆರ್.ಟಿ.ಸಿ. correction ಆಗಬೇಕಾಗಿರುವ ಬಗ್ಗೆ demand ನಲ್ಲಿ ನಿಮಗೆ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರೆ, ತಮಗೆ ಒಂದು ಮಾತನ್ನು ಹೇಳುತ್ತೇನೆ. ತಾವು ತಪ್ಪು ತಿಳಿದುಕೊಳ್ಳಬೇಡಿ. ಕೆಲವು ಅಧಿಕಾರಿಗಳು computer ಇಟ್ಟುಕೊಂಡು ಕುಳಿತಿದ್ದಾರೆ. ಊರಿನಲ್ಲಿ ಹೇಗೆ ಪಹಣಿ ಬರೆಯುತ್ತಾರೆ ಎಂಬುದರ ಬಗ್ಗೆ ಗೊತ್ತಿರುವುದಿಲ್ಲ. ಪಹಣಿಯೊಳಗೆ ಫಸಲು ಬರೆಯುವುದಿಲ್ಲ. ಫಸಲು ಬರೆದರೆ ಇರುವುದು ಯಾರ ತಪ್ಪು ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಅಧ್ಯಕ್ಷರೆ, ಗ್ರಾಮಗಳಲ್ಲಿ ಕಂದಾಯದಾರರ ಮಟ್ಟದಲ್ಲಿ ಮಾಡುತ್ತೇವೆ.

ಶ್ರೀ ಡಿ.ಎನ್. ಜೀವರಾಜ್ : ಪಹಣಿಯಲ್ಲಿ ಫಸಲು ಬರೆಯದೆ ಇರುವುದಕ್ಕೆ ಕಾರಣವೇನೆಂದರೆ, ಅಲ್ಲಿ ಫಸಲು ಬರೆದರೆ ಇವರಿಗೆ ಬರಬೇಕಾದ ಫಸಲು ಬರುವುದಿಲ್ಲ! ಆ ಫಸಲು ಬರೆಸುವುದಕ್ಕೆ ಹೋದಾಗ ಇವರಿಗೆ ಫಸಲು ಬರುತ್ತದೆ. ಲೋಕಲ್‌ನಲ್ಲಿ ಏಕೆ ಹೀಗೆ ಆಗಿದೆ ಎಂಬುದನ್ನು ನಾನು ಹೇಳಿದ್ದೇನೆ. ಲೋಕಲ್‌ನಲ್ಲಿ ಇರುವುದನ್ನು ಸರಿಪಡಿಸಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮಾನ್ಯ ಜೀವರಾಜ್, ಅದನ್ನು ಹೇಗೆ ಸರಿಪಡಿಸಬೇಕೆಂದು ಯೋಚನೆ ಮಾಡಬೇಕಲ್ಲವೇ? ತಾವು ಇಷ್ಟಕ್ಕೇ ಸೀಮಿತರಾಗಿರುತ್ತೀರಿ ಹೊರತು ನಾವು ಏನು ಮಾಡಿದ್ದೇವೆ? What is progress further ಏನು ಮಾಡಬೇಕು ? ಎಂಬ ಬಗ್ಗೆ ತಾವು ಮಾತನಾಡುವುದಕ್ಕೇ ತಯಾರಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ತಾವು ಬಹಳ ಇಲಾಖೆಯಲ್ಲಿ ಕೆಲಸ ಮಾಡಿರುವಂಥವರು. ತಮಗೆ ಸಾಕಷ್ಟು ಅನುಭವವಿದೆ. ಇದನ್ನು ಮಾಡಲೇಬೇಕು. ಈಗ ಕಂಪ್ಯೂಟರ್ ವ್ಯವಸ್ಥೆ ಇರಬೇಕಾದರೆ ಆರ್.ಟಿ.ಸಿ. ತಿದ್ದುಪಡಿಗೆ ಆರು ತಿಂಗಳು, ಒಂದು ವರ್ಷ ಬೇಕಾಗುತ್ತದೆ ಎಂದರೆ ಹೇಗೆ ?

(ಗೊಂದಲ)

ಅಧ್ಯಕ್ಷರು : ಆದ್ದರಿಂದಲೇ ಅದರ ಬಗ್ಗೆ ಒಂದು ಚರ್ಚೆ ಆಗಲಿ ಎಂದು ನಾನು ಹೇಳುತ್ತಿರುವುದು.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ : ಅಧ್ಯಕ್ಷರೆ, ಅದಕ್ಕೆ ನಾನು ಬೆಳಿಗ್ಗೆ ತಮ್ಮನ್ನು ಭೇಟಿ ಮಾಡಿ, ಪೋಡಿ, ಪಹಣಿ, ಆರ್.ಟಿ.ಸಿ ಬಗ್ಗೆ.....

ಅಧ್ಯಕ್ಷರು : ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಹಾಕಿಕೊಳ್ಳೋಣ.ಇದರ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ಮಾಡೋಣ. you throw some light.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಮಾನ್ಯ ದತ್ತರವರೆ, ತಾವು ಮೂಲ ಸಮಸ್ಯೆಯನ್ನೇ ತಿಳಿದುಕೊಳ್ಳುತ್ತಿಲ್ಲ. ಪೋಡಿ ಯಾಕಾಗಿದೆ, ಹದ್ದುಬಸ್ತು ಏಕೆ ಆಗಿಲ್ಲ ? RTC corrections ಗೆ ಏನು ಮಾಡಿದ್ದೇವೆ? ಎಂಬುದರ ಬಗ್ಗೆ ತಾವು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತಿಲ್ಲ. ನಾನು ಹೇಗೆ ಉತ್ತರವನ್ನು ಕೊಡಲಿ? ಆರ್.ಟಿ.ಸಿ. Corrections ಅನ್ನು ಇನ್ನೂ 6 ತಿಂಗಳೊಳಗೆ ಮಾಡುತ್ತೇವೆಂದರೆ ತಾವು ಕೇಳುವುದಕ್ಕೇ ತಯಾರಿಲ್ಲ. Demands ಬಂದಾಗ ಮಾತನಾಡೋಣವೆಂದು ಅಧ್ಯಕ್ಷರು ಹೇಳಿದ್ದಾರೆ. ಆಗ ಚರ್ಚೆ ಮಾಡೋಣ

ಅಧ್ಯಕ್ಷರು : Demands ಬಂದಾಗ ಬಹಳ ಚರ್ಚೆ ಮಾಡಿಸಬೇಕಾಗಿದೆ.

ಡಾ: ಸುಧಾಕರ್ ಕೆ. : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಒತ್ತುವರಿ ಜಾಗಗಳ ವಿಚಾರದಲ್ಲಿ ಕರ್ನಾಟಕ ಕಂದಾಯ ಅಧಿನಿಯಮ 1964 ತಿದ್ದುಪಡಿ 192(ಎ) ಪ್ರಕಾರ ನಾವು ಯಾವುದೇ ಕಾನೂನು ರೀತ್ಯ ಕ್ರಮವನ್ನು ಒತ್ತುವರಿ ಮಾಡಿರುವವರ ಮೇಲೆ ತೆಗೆದುಕೊಳ್ಳುತ್ತಿಲ್ಲ. ಹಾಗಾಗಿ, ಕಾನೂನಿನ ಬಗ್ಗೆ ಯಾರಿಗೂ ಭಯ ಇಲ್ಲ, ಅಂಜಿಕೆ ಇಲ್ಲ.

ಅಧ್ಯಕ್ಷರು : ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೀರಾ?

ಡಾ: ಸುಧಾಕರ್ ಕೆ. : ಹೌದು ಅಧ್ಯಕ್ಷರೆ, 192(ಎ) ಮತ್ತು 192(ಬಿ) ರೀತ್ಯಾ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನಮ್ಮ ಊರಿನ ಕಡೆ ಬನ್ನಿ, ಈ ರೀತಿ ಕ್ರಮ ತೆಗೆದುಕೊಂಡರೆ ನಮ್ಮ ಊರಿನಲ್ಲಿ ನಮ್ಮ ಮನೆ ಸಹ ಹೋಗುತ್ತದೆ. ಮಲೆನಾಡಿನ ಕಥೆಯನ್ನು ನೀವು ಕೇಳಿದ್ದೀರಾ? ಚೆನ್ನಾಗಿ ಹೇಳುತ್ತಿದ್ದೀರಿ !

ಡಾ: ಸುಧಾಕರ್ ಕೆ. : ಹಳೆ ಮೈಸೂರಿನ ಕಡೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅವರು ಜಾಗವನ್ನು ಮಂಜೂರು ಮಾಡಿಸಿಕೊಂಡು ಮನೆಯನ್ನು ಕಟ್ಟಿಕೊಂಡಿದ್ದಾರೆಯೇ, ಕೇಳಿ ಅವರನ್ನು ಹೇಳುತ್ತಾರೆ. ಆದ್ದರಿಂದ, ಕಂದಾಯ ವಿಷಯ ಬಂದಾಗ ಇದನ್ನೆಲ್ಲಾ ಚರ್ಚೆ ಮಾಡೋಣ. You throw some light. ಚರ್ಚೆ ಮಾಡುವುದು ಬಾಕಿಯಿದೆ. ಏಕೆಂದರೆ, ಸೆಕ್ಷನ್ 192ನ್ನು ನೀವೇ ಜಾರಿಗೆ ತಂದವರು. ಕಂದಾಯ ಇಲಾಖೆಯ ಬೇಡಿಕೆಗಳು ಮೇಲೆ ಚರ್ಚೆ ಮಾಡುವಾಗ ಈ ಎಲ್ಲ ವಿಚಾರಗಳ ಬಗ್ಗೆ ಚರ್ಚೆ ಮಾಡಿ, ಬೆಳಕು ಚೆಲ್ಲೋಣ.

ವನ್ಯ ಮೃಗಗಳಿಂದ ರೈತರ ಬೆಳೆ ಹಾನಿಯಾಗುತ್ತಿರುವುದು

12 (64) ಶ್ರೀ ಕೋಳಿವಾಡ ಕೆ.ಬಿ. (ರಾಣೆಬೆನ್ನೂರು) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ವನ್ಯ ಮೃಗಗಳಿಂದ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅರಣ್ಯ ಬಿಟ್ಟು ರೈತರ ಹೊಲಗಳಿಗೆ ಮೃಗಗಳು ಹೋಗದಂತೆ ಸರ್ಕಾರ ಕೈಗೊಂಡ ಕ್ರಮವೇನು ;

(ಆ) ರಾಣೇಬೆನ್ನೂರು ವನ್ಯಧಾಮ ದೇಶದಲ್ಲೇ ಪ್ರಸಿದ್ಧವಾಗಿದ್ದು, ಆ ಅರಣ್ಯದಲ್ಲಿ ಪ್ರವಾಸೋದ್ಯಮ ಕೇಂದ್ರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು) :–

(ಅ) ಇಲಾಖೆ ಮತ್ತು ಗ್ರಾಮಸ್ಥರ ಸಹಯೋಗದೊಂದಿಗೆ ಪ್ರತಿ ರೈತನಿಗೆ ಅಥವಾ ರೈತರ ಗುಂಪಿಗೆ ಸಹಾಯಧನ ರೂಪದಲ್ಲಿ ಅಂದರೆ 50:50 ಅನುಪಾತದಲ್ಲಿ ಸೋಲಾರ ತಂತಿಬೇಲಿ ನಿರ್ಮಾಣ ಮಾಡುವ ಹೊಸ ಯೋಜನೆಯನ್ನು 2014–15 ಸಾಲಿನಿಂದ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೇವು ಪೂರೈಕೆ ಜಾಗಗಳ ನಿರ್ಮಾಣ, ವನ್ಯ ಪ್ರಾಣಿಗಳಿಗೆ ಕುಡಿಯಲು ನೀರಿನ ಬಾನಿ ನಿರ್ಮಾಣ, ವನ್ಯಪ್ರಾಣಿಗಳು ಅಭಯಾರಣ್ಯ ಬಿಟ್ಟು ಹೊರಗೆ ಹೋಗದಂತೆ ಅಭಯಾರಣ್ಯದಲ್ಲಿ ಮೇವಿನ ಬೆಳೆಯಲಾಗಿದೆ ಹಾಗೂ ಜಾನುವಾರು ನಿರೋಧಕ ಕಂದಕ ನಿರ್ಮಾಣ ಮಾಡಲಾಗಿದೆ.

(ಆ) ಇಲ್ಲ.

ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 64ನ್ನು ಮಾನ್ಯ ಅರಣ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಅಧ್ಯಕ್ಷರು : ಆಗಲೇ ವನ್ಯಮೃಗಗಳಿಂದ ರೈತರ ಬೆಳೆಗೆ ಆಗುತ್ತಿರುವ ಹಾನಿಗೆ ಪರಿಹಾರ ಕೊಡುವ ವಿಷಯ ಪ್ರಸ್ತಾಪವಾಗಿತ್ತಲ್ಲ ?